ಕನ್ನಡ ಪೋಸ್ಟ್
ಸಂಪಾದಕ : ಮಂಜು ಬನವಾಸೆ
KANNADA POST
ಇದು ಸುದ್ದಿ ವಿಲಾಸ
ಕನ್ನಡ ದಿನಪತ್ರಿಕೆ
ಹಾಸನ
E-mail : kannadapostnews@gmail.com / ಕನ್ನಡ post
Price: ₹1
Vol.No.02 | Issue. 95 | Pages. 2 | Date: 14-03-2026, SATURDAY RNI NO: KARKAN/2024/89601 Kannada Daily
ಸಂಪುಟ : 02 - ಸಂಚಿಕೆ : 95 - ಪುಟಗಳು : 2 14-03-2026 ಶನಿವಾರ Ph: 8762954248 ದರ : ₹1

# ಮೆಗಾ ಡೇರಿ ಉದ್ಘಾಟನೆಗೆ ಪ್ರಧಾನಿ ಮೋದಿ

## ಮೇ 20ರ ಬಳಿಕ ದಿನಾಂಕ ನಿಗದಿ I ಹಾಮೂಲ್ ಅಧ್ಯಕ್ಷ ಹೆಚ್.ಡಿ.ರೇವಣ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ನಗರದ ಕೈಗಾರಿಕಾ ಪ್ರದೇಶದಲ್ಲಿ 810 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಅತ್ಯಾಧುನಿಕ ಮೆಗಾ ಡೇರಿ ಉದ್ಘಾಟನೆಯನ್ನು ಮೇ ತಿಂಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ ಎಂದು ಹಾಮೂಲ್ ಅಧ್ಯಕ್ಷ ಹೆಚ್.ಡಿ.ರೇವಣ್ಣ ಹೇಳಿದರು.

ನಗರದ ಡೇರಿ ಆವರಣದಲ್ಲಿ ಒಕ್ಕೂಟದ ಅಧ್ಯಕ್ಷ ಹಾಗೂ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ ವಿಶೇಷ ಸಾಮಾನ್ಯ ಸಭೆಯಲ್ಲಿ ಮಾತನಾಡಿ, ಪ್ರಧಾನಿ ಜೊತೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಹಾಗೂ ರಾಜ್ಯಗಳ ಹೈನುಗಾರಿಗೆ ಹಾಗೂ ಸಹಕಾರ ಸಚಿವರನ್ನು ಆಹ್ವಾನಿಸಲು ನಿರ್ಧರಿಸಲಾಗಿದೆ ಎಂದರು.

ಮೆಗಾ ಡೇರಿ ಕಾಮಗಾರಿ 2017-18 ನೇ ಸಾಲಿನಲ್ಲಿ ಆರಂಭವಾಯಿತು. ಈಗ ಬಹುತೇಕ ಮುಕ್ತಾಯ ಹಂತಕ್ಕೆ ಬಂದಿದೆ. ದಿನಕ್ಕೆ 10 ಲಕ್ಷ ಲೀಟರ್ ಹಾಲು ಸಂಸ್ಕರಣೆ ಮಾಡಬಹುದು. ಮುಂದೆ 15 ಲಕ್ಷ ಲೀಟರ್‌ಗೆ ಹೆಚ್ಚಿಸಬಹುದಾಗಿದೆ ಎಂದರು.



### ಥೀಮ್ ಪಾರ್ಕ್ ನಿರ್ಮಾಣಕ್ಕೆ ಕ್ರಮ

ಮೆಗಾಡೇರಿಯ ಪ್ರಮುಖ ಆಕರ್ಷಣೆ ಎಂದರೆ ಥೀಮ್ ಪಾರ್ಕ್ ಯೋಜನೆ. ಎರಡು ತಿಂಗಳಲ್ಲಿ ನಿರ್ಮಾಣ ಪೂರ್ಣಗೊಳ್ಳಲಿದೆ. ರೈತರ ಮಕ್ಕಳು ಹಾಗೂ ಪ್ರವಾಸಿಗರಿಗೆ ಮುದ ನೀಡುವ ಡೇರಿ ಆವರಣವನ್ನು ಆಕರ್ಷಕ ಮತ್ತು ಪ್ರೇಕ್ಷಣೀಯ ಮಾಡಲು 70 ಕೋಟಿ ರೂ. ವಿನಿಯೋಗ ಮಾಡಲಾಗಿದೆ ಎಂದು ಹೆಚ್.ಡಿ.ರೇವಣ್ಣ ಹೇಳಿದರು. ವಾಟರ್ ಫಾಲ್ಸ್, ಕೆಫೆಟೇರಿಯಾ, ಹೊರ ದೇಶದ ವ್ಯವಸ್ಥೆಯನ್ನು ಇಲ್ಲೂ ತರಲಾಗಿದ್ದು, ನೋಡಲು ತುಂಬಾ ಚೆನ್ನಾಗಿದೆ ಎಂದರು.

2 ಲಕ್ಷ ಲೀಟರ್ ಹಾಲು ಪ್ಯಾಕಿಂಗ್, 1 ಲಕ್ಷ ಲೀಟರ್ ಮೊಸಲು ತಯಾರಿಕೆ, ದಿನವಹಿ 40 ಟನ್ ಬೆಣ್ಣೆ ತಯಾರಿಕೆ, 10 ಟನ್ ತುಪ್ಪ ತಯಾರಿಕೆ ಮಾಡಬಹುದು. ಹಾಗೆಯೇ ಎಸ್ ಎಂಪಿ ಡಬ್ಲ್ಯು ಎಂಪಿ ಸಾಮರ್ಥ್ಯ ದಿನಕ್ಕೆ 60 ಟನ್ ಇದೆ ಎಂದರು.

> ಮೆಗಾ ಡೇರಿ ನಿರ್ಮಾಣಕ್ಕೆ ಹಾಸನ ಹಾಲು ಒಕ್ಕೂಟದಿಂದ 400 ಕೋಟಿ.ರೂ. ತೊಡಗಿಸಲಾಗಿದೆ. ಎನ್‌ಡಿಡಿಬಿ ಯಿಂದ 350 ಕೋಟಿ ರೂ. ಸಾಲ ಮಂಜೂರಾಗಿತ್ತು. ಇದರಲ್ಲಿ 298 ಕೋಟಿ ಬಿಡುಗಡೆಯಾಗಿದೆ. ಈಗಾಗಲೇ 88 ಕೋಟಿ ರೂ. ಸಾಲ ತೀರಿಸಲಾಗಿದೆ. 2ನೇ ಹಂತದಲ್ಲಿ ಮತ್ತೆ 150 ಕೋಟಿ ರೂ.ಸಾಲ ಮಂಜೂರಾಗಿದೆ. ಇದು ರಾಜ್ಯ ಮತ್ತು ರಾಷ್ಟ್ರದಲ್ಲಿ ಮೊದಲಾಗಬೇಕು ಎಂಬುದು ನಮ ಉದ್ದೇಶ.
>
> **- ಹೆಚ್.ಡಿ.ರೇವಣ್ಣ, ಹಾಮೂಲ್ ಅಧ್ಯಕ್ಷ**

ಮೊದಲ ಹಂತದಲ್ಲಿ ಸುವಾಸಿತ ಹಾಲಿನ ಪೆಟ್‌ಬಾಟೆಲ್ ಘಟಕ ನಿರ್ಮಾಣ ಪೂರ್ಣಗೊಂಡಿದ್ದು, ಉತ್ಪಾದನಾ ಕಾರ್ಯ ಚಾಲ್ತಿಯಲ್ಲಿದೆ. ಯು.ಹೆಚ್.ಡಿ.ಘಟಕದ ಉತ್ಪಾದನಾ ಸಾಮರ್ಥ್ಯ ನಿತ್ಯ 2 ಲಕ್ಷ ಲೀಟರ್‌ನಿಂದ 4 ಲಕ್ಷ ಲೀಟರ್‌ಗಳಿಗೆ ವಿಸ್ತರಿಸುವ ಯೋಜನೆ ಇದೆ ಎಂದರು. ಮೆಗಾಡೇರಿ ಆರಂಭಕ್ಕೂ ಮುನ್ನ ಟ್ರಯಲ್ ರನ್ ಕೆಲಸ ಶುರುವಾಗಿದ್ದು, ಒಂದೂವರೆ ತಿಂಗಳು ಪೂರ್ಣ ಆಗಲಿದೆ ಎಂದರು.

ಮೆಗಾ ಡೇರಿ ಉದ್ಘಾಟನೆಗೆ ಪ್ರಧಾನಿ ಅವರು ಬರಲು ಒಪ್ಪಿದ್ದಾರೆ, ನಿರ್ಮಾಣ ಹೊಣೆಯನ್ನು ಬೆಂಗಳೂರು ಕೆಎಂಎಫ್‌ಗೆ ಕೊಟ್ಟಿದ್ದೇವೆ, ಲೋಕೋಪಯೋಗಿ ಇಲಾಖೆ ದೃಢೀಕರಣ ಮಾಡಬೇಕು. ಒಟ್ಟಾರೆ ಖರ್ಚು 900 ಕೋಟಿ ರೂ.ಗೆ ತಲುಪಬಹುದು ಎಂದರು.

ಹೊಳೆನರಸೀಪುರ ಕ್ಷೇತ್ರದಲ್ಲಿ ಮೇಗಾ ಡೇರಿ:

ಪ್ರಧಾನಿ ಆಗಮನ ಹಿನ್ನೆಲೆಯಲ್ಲಿ ಶಿಷ್ಟಾಚಾರ ಪ್ರಕಾರ ಕಾರ್ಯಕ್ರಮ ಆಯೋಜನೆ ಮಾಡಲಾಗುವುದು ಎಂದ ರೇವಣ್ಣ, ಮೆಗಾ ಡೇರಿ ನಾನು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರದಲ್ಲೇ ನಿರ್ಮಾಣ ಆಗುತ್ತಿದೆ. ಮೇ 20ರ ನಂತರ ಕಾರ್ಯಕ್ರಮ ದಿನಾಂಕ ಗೊತ್ತುಪಡಿಸಲಾಗುವುದು. ಅಂದಿನ ಕಾರ್ಯಕ್ರಮದಲ್ಲಿ ಹಾಸನ ಹಾಲು ಒಕ್ಕೂಟದ 1.10 ಲಕ್ಷ ಮಹಿಳಾ ಹಾಗೂ ಪುರುಷ ಸದಸ್ಯರು ಒಂದೇ ರೀತಿಯ ವಸ್ತ್ರ ಧರಿಸಿ ಬರಬೇಕು. ಅಂದು ಹಬ್ಬದ ರೀತಿಯಲ್ಲಿ ಕಾರ್ಯಕ್ರಮ ಮಾಡಲು ಯೋಜಿಸಲಾಗಿದೆ. ಬಂದ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗುವುದು ಎಂದರು.

ರಾಜ್ಯದಲ್ಲೇ ಹಾಸನ ಒಕ್ಕೂಟ ಮೊದಲ ಸ್ಥಾನಕ್ಕೆ ಕೊಂಡೊಯ್ಯುವುದು ನಮ್ಮ ಗುರಿ ಎಂದರು.

ಈ ವೇಳೆ ಎಂಡಿ ಮಹೇಶ್, ನಿರ್ದೇಶಕರಾದ ಹೊನ್ನವಳ್ಳಿ ಸತೀಶ್, ನಾರಾಯಣಗೌಡ ಮೊದಲಾದವರಿದ್ದರು.

# ಎಲ್ಲ ರಂಗದಲ್ಲೂ ಮಹಿಳೆಯರ ಪ್ರಾಬಲ್ಯ: ಶ್ಲಾಘನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಸಮಾಜದಲ್ಲಿ ಹೆಣ್ಣು ಪುರುಷರಷ್ಟೇ ಸಮಾನವಾಗಿ ಬೆಳೆದಿದ್ದಾಳೆ. ಎಲ್ಲಾ ರಂಗಗಳಲ್ಲಿಯೂ ಛಾಪು ಮೂಡಿಸಿ ಸಾಧನೆ ಮಾಡುತ್ತಿದ್ದಾಳೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಜಿಲ್ಲಾ ಪಂಚಾಯಿತಿ, ಸಂಜೀವಿನಿ - ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜಿಲ್ಲಾ ಜೀವನೋಪಾಯ ಇಲಾಖೆಯಿಂದ ಶುಕ್ರವಾರ ಹಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರಕೃತಿ ಹೆಣ್ಣು, ಭಾರತಾಂಭೆ ಹೆಣ್ಣು. ನದಿಗಳಿಗೆ ಹೆಣ್ಣಿನ ಹೆಸರನ್ನು



ಇಡಲಾಗಿದೆ. ಇಂದಿನ ಹೆಣ್ಣು ಮಕ್ಕಳು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಬೇಕೆಂದು ಎಂದು ಹೇಳಿದರು.

ಹೆಣ್ಣು ಮಕ್ಕಳ ಹಿಂದಿನ ಸಮಸ್ಯೆಗಳಿಗೂ ಈಗಿನ ಸಮಸ್ಯೆಗಳಿಗೂ ಬಹಳಷ್ಟು ವ್ಯತ್ಯಾಸವಿದೆ. ಪುರುಷ ಸಮಾಜದಿಂದ ಮಹಿಳೆಯರು ಇನ್ನೂ ಹೆಚ್ಚಿನ ಸ್ವಾವಲಂಬನೆಯನ್ನು ಪಡೆಯಬೇಕು, ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಬೆಳೆಸಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಮಾತನಾಡಿ, ಹೆಣ್ಣು ಕಚೇರಿಯಲ್ಲಿ ಒಬ್ಬ ಅಧಿಕಾರಿಯಾಗಿ ಅಥವಾ ಸಿಬ್ಬಂದಿಯಾಗಿ, ಮನೆಯಲ್ಲಿ ಗಂಡನಿಗೆ ಹೆಂಡತಿಯಾಗಿ, ಮಕ್ಕಳಿಗೆ ಉತ್ತಮ ತಾಯಿಯಾಗಿ ಅಣ್ಣ ತಮ ಅಕ್ಕ ತಂಗಿಯರಿಗೆ ಸಹೋದರಿಯಾಗಿರಬೇಕು. ಹೆಣ್ಣಿಗೆ ಸ್ವಾತಂತ್ರ್ಯವಿದೆ. ಆದರೆ ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ವಿವಿಧ ಕಾರ್ಯರಂಗಗಳಲ್ಲಿ ಉನ್ನತ ಹುದ್ದೆಯಲ್ಲಿದ್ದರೂ ಯಾವುದೇ ಅಹಂ ಇಲ್ಲದೇ ಮನೆಗಳಲ್ಲಿ ಒಬ್ಬ ಗೃಹಿಣಿಯಾಗಿದ್ದರೆ ಮಹಿಳೆಯರ ಜೀವನ ಸಾರ್ಥಕವಾಗುತ್ತದೆ ಎಂದರು.

ಉತ್ತಮವಾಗಿ ಕಾರ್ಯ ನಿರ್ವಹಿಸಿದ ವಿವಿಧ ತಾಲ್ಲೂಕುಗಳ ಮಹಿಳಾ ಒಕ್ಕೂಟಗಳಿಗೆ ಮೊದಲ ಬಹುಮಾನವಾಗಿ ಒಂದು ಲಕ್ಷ, ದ್ವಿತೀಯ ಬಹುಮಾನ ಎಪ್ಪತ್ತೈದು ಸಾವಿರ ಹಾಗೂ ತೃತೀಯ ಬಹುಮಾನ ಐವತ್ತು ಸಾವಿರ ರೂ. ಬಹುಮಾನವಾಗಿ ವಿತರಿಸಲಾಯಿತು. ಉತ್ತಮವಾಗಿ ಕಾರ್ಯ ನಿರ್ವಹಿಸಿದ ಸ್ತ್ರೀಶಕ್ತಿ ಸಂಘಗಳಿಗೂ ಸಹ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಉಪಕಾರ್ಯದರ್ಶಿ ಬಾಬು, ಕೃಷ್ಣಮೂರ್ತಿ, ಮುಖ್ಯ ಯೋಜನಾಧಿಕಾರಿ ಕೃಷ್ಣಮೂರ್ತಿ, ಯೋಜನಾ ನಿರ್ದೇಶಕ ಚಂದ್ರಮೌಳಿ ಮತ್ತಿತರರಿದ್ದರು

# ತಂಬಾಕಿಗೆ ಅಬಕಾರಿ ಸುಂಕ ಹೊರೆ

## ಕೇಂದ್ರ ಸಚಿವರ ಭೇಟಿಯಾದ ಸಂಸದ ಶ್ರೇಯಸ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ನವದೆಹಲಿ: ತಂಬಾಕು ಬೆಳೆಗೆ ಅಬಕಾರಿ ಸುಂಕ ವಿಧಿಸುತ್ತಿರುವ ಪರಿಣಾಮ ಬೆಲೆಯಲ್ಲಿ ಭಾರೀ ಕುಸಿತವಾಗಿ ಬೆಳೆಗಾರರು ಸಮಸ್ಯೆಗೆ ಸಿಲುಕಿದ್ದು ಸರ್ಕಾರ ಮಧ್ಯ ಪ್ರವೇಶಿಸಿ ಪರಿಹಾರ ಕ್ರಮ ಜರುಗಿಸಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಸಂಸತ್ ಅಧಿವೇಶನ ನಿಮಿತ್ತ ದೆಹಲಿ ಪ್ರವಾಸದಲ್ಲಿರುವ ಅವರು ಶುಕ್ರವಾರ ಸಚಿವರನ್ನು ಭೇಟಿಯಾಗಿ ಸಮಸ್ಯೆ ಬಿಚ್ಚಿಟ್ಟರು. ಕರ್ನಾಟಕದಲ್ಲಿ ತಂಬಾಕು ಹರಾಜು ಪ್ರಕ್ರಿಯೆ ಆರಂಭವಾಗಿದೆಯಾದರೂ ಬೆಳೆಗಾರರಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ. 2025ರ ಡಿ. 31 ರಂದು ಕೇಂದ್ರ ಸರ್ಕಾರ ಸಂಸ್ಕರಿಸದ ತಂಬಾಕಿನ ಮೇಲೆ ಶೇ. 40 ರಷ್ಟು ಜಿಎಸ್‌ಟಿ ವಿಧಿಸಿರುವುದು ತೊಂದರೆಗೆ ಕಾರಣವಾಯಿತು. ಈ ಪ್ರಕ್ರಿಯೆ ವ್ಯಾಪಕ ವಿರೋಧ ವ್ಯಕ್ತವಾದ ಬಳಿಕ ಜಿಎಸ್ ಟಿಯನ್ನು ವಾಪಾಸ್ ಪಡೆಯಿತಾದರೂ ತಂಬಾಕು ಉತ್ಪನ್ನಗಳ ಮೇಲಿನ ಹೆಚ್ಚಿದ ಅಬಕಾರಿ ತೆರಿಗೆ ಮುಂದುವರಿದಿರುವುದರಿಂದ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದೆ ಎಂದರು.



ತಂಬಾಕು ಉತ್ಪನ್ನಗಳ ಮೇಲೆ ಅಬಕಾರಿ ತೆರಿಗೆ ಹೆಚ್ಚಿಸಿರುವುದರಿಂದ ಮಾರಾಟದಲ್ಲಿ ಕುಸಿತವಾಗಿದೆ. ಹೀಗಾಗಿ ತಂಬಾಕು ಹರಾಜು ಪ್ರಕ್ರಿಯೆಯಲ್ಲಿ ಭಾರೀ ವ್ಯತ್ಯಾಸವಾಗಿದೆ. ಮೊದಲಿನ ಬೆಲೆಗೆ ಹೋಲಿಸಿದರೆ ಸದ್ಯ ಬ್ರೈಟ್ ಗ್ರೇಡ್ ತಂಬಾಕಿನ ಬೆಲೆ ಪ್ರತಿ ಕೆ.ಜಿ.ಗೆ 45-50 ರಷ್ಟು ಇಳಿಕೆಯಾಗಿದೆ. ಮುಖ್ಯ ಉತ್ಪಾದಕ ಹಾಗೂ ರಫ್ತುದಾರ ಸಂಸ್ಥೆಯಾದ ಐಟಿಸಿ ಲಿಮಿಟೆಡ್, ಹರಾಜುಗಳಲ್ಲಿ ನೋಂದಾಯಿತ ಖರೀದಿದಾರರಾಗಿದ್ದು, ಮೊದಲಿನಿಂದ ನಿತ್ಯ ಶೇ. 45 ರಿಂದ 50ರ ವರೆಗೆ ಖರೀದಿ ಮಾಡುತ್ತಿತ್ತು. ಆದರೆ ಮಾರುಕಟ್ಟೆ ಅಸ್ಥಿರತೆಯಿಂದ ಶೇ. 50 ರಷ್ಟು ಕಡಿಮೆಯಾಗಿದೆ. ಪ್ರಸ್ತುತ ಹರಾಜಿನ ಒಟ್ಟು ಪ್ರಮಾಣದಲ್ಲಿ ಅದರ ಖರೀದಿ ಪಾಲು ಸುಮಾರು ಶೇ. 23 ಮಾತ್ರವಾಗಿದೆ. ಪ್ರಮುಖ ಖರೀದಿದಾರನ ಭಾಗವಹಿಸುವಿಕೆ ಕಡಿಮೆಯಾದ ಕಾರಣ ಬೆಲೆ ನಿರ್ಧಾರ ಪ್ರಕ್ರಿಯೆ ಹಾಗು ಮಾರುಕಟ್ಟೆಯ ಒಟ್ಟಾರೆ ಸ್ಥಿರತೆ ಮೇಲೆ ಪರಿಣಾಮ ಬೀರಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಸಚಿವರ ಗಮನಕ್ಕೆ ತಂದರು.

ಅಬಕಾರಿ ಸುಂಕ ಹೆಚ್ಚಿಸಿರುವ ಹಿನ್ನೆಲೆಯಲ್ಲಿ ಮಾರುಕಟ್ಟೆಯಲ್ಲಿ ನಿರ್ಬಂಧಿತ ಪರಿಸ್ಥಿತಿ ಉಂಟಾಗಿದೆ. ಅದರಿಂದ ಹರಾಜುಗಳಲ್ಲಿ ಸ್ಪರ್ಧಾತಕ ಬಿಡ್ಡಿಂಗ್ ಕಡಿಮೆಯಾಗಿದ್ದು, ರೈತರಿಗೆ ದೊರೆಯುವ ಬೆಲೆಯೂ ಇಳಿಕೆಯಾಗಿದೆ. ಕೇಂದ್ರ ಸರ್ಕಾರ ಕೂಡಲೇ ಅಬಕಾರಿ ಸುಂಕ ಕಡಿಮೆ ಮಾಡಬೇಕು. ತಂಬಾಕು ಮಂಡಳಿ ಹಾಗೂ ಬೆಳೆಗಾರರೊಂದಿಗೆ ಸಭೆ ನಡೆಸಿ ಸೂಕ್ತ ತಿದ್ದುಪಡಿ ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದರು.

# ಗ್ರಾಮಸ್ಥರೇ ಅಭಿನಯಿಸಿದ ಪೌರಾಣಿಕ ನಾಟಕ ನಾಳೆ ಪ್ರದರ್ಶನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಚನ್ನರಾಯಪಟ್ಟಣ: ಒತ್ತಡದ ಬದುಕಿನ ನಡುವೆ ಸಮಯ ಮಾಡಿಕೊಂಡು ತರಬೇತಿ ಪಡೆದು ಗ್ರಾಮಸ್ಥರೇ ಅಭಿನಯಿಸಿರುವ ಪೌರಾಣಿಕ ನಾಟಕ ತಾಲ್ಲೂಕಿನ ಉಳ್ಳಾವಳ್ಳಿ ಗ್ರಾಮದಲ್ಲಿ ಮಾ. 15 ರಂದು ಪ್ರದರ್ಶನ ಕಾಣಲಿದೆ.

ಶ್ರೀ ಭೈರವೇಶ್ವರ ಸ್ವಾಮಿ ಹಬ್ಬದ ಪ್ರಯುಕ್ತ ನಾಟಕ ಪ್ರದರ್ಶನವಾಗಲಿದ್ದು, ಅದಕ್ಕಾಗಿ ಸಕಲ ಸಿದ್ಧತೆಗಳು ನಡೆದಿವೆ. ಒಂದು ಶತಮಾನಕ್ಕೂ ಹಿಂದಿನ ಪರಂಪರೆಯನ್ನು ಇಂದಿಗೂ ಸಹ ಭಕ್ತಿ-ಭಾವದಿಂದ ಸೌಹಾರ್ದತೆಯ ಸಂಕೇತವಾಗಿ ಕಲಾ ಪ್ರದರ್ಶನವನ್ನು ಶ್ರೀ ಬೈರವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ ಮಾಡಿಕೊಂಡು ಬರುತ್ತಿದೆ. ಹಿರಿಯರ ಮಾರ್ಗದರ್ಶನದಲ್ಲಿ 30ಕ್ಕೂ ಹೆಚ್ಚು ಯುವಕರ ತಂಡ ಬಣ್ಣ ಹಚ್ಚುತ್ತಿದೆ. ದಿ.ರಂಗಶೆಟ್ಟಿ, ದಿ.ಕೃಷ್ಣೇಗೌಡ, ದಿ.ಸೀನಪ್ಪ, ದಿ.ತಿಮ್ಮೇಗೌಡ, ದಿ.ಬಸವರಾಜು, ದಿ.ಚಂದ್ರು ಅವರಿಂದ ಬಳುವಳಿಯಾಗಿ ನಾಟಕ ಕಲೆ ಬಂದಿದೆ. ಗ್ರಾಮದ ರೈತರು, ಯುವಕರು, ಕಾರ್ಮಿಕರು, ವ್ಯಾಪಾರಿಗಳು, ಆಟೋ ಕಾರು-ಚಾಲಕರು, ವಿದ್ಯಾರ್ಥಿಗಳು ಬಣ್ಣ ಹಚ್ಚಲಿದ್ದಾರೆ.

# ಅಗಲಹಳ್ಳಿಯಲ್ಲಿ ಆಂಜನೇಯಸ್ವಾಮಿ ದೇಗುಲಕ್ಕೆ ಭೂಮಿಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ತಾಲ್ಲೂಕಿನ ಅಗಲಹಳ್ಳಿ ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಾಲಯದ ನಿರ್ಮಾಣ ಕಾಮಗಾರಿಗೆ ಶುಕ್ರವಾರ ಶಾಸಕ ಹೆಚ್.ಪಿ.ಸ್ವರೂಪ್ ಭೂಮಿಪೂಜೆ ನೆರವೇರಿಸಿದರು.

ರ್ಯಕ್ರಮದಲ್ಲಿ ಮಾತನಾಡಿದ ಅವರು, ದೇವಾಲಯಗಳು ಗ್ರಾಮೀಣ ಭಾಗದಲ್ಲಿ ಭಕ್ತಿಯ ಜೊತೆಗೆ ಸಾಮಾಜಿಕ ಒಗ್ಗಟ್ಟು ಮೂಡಿಸುತ್ತವೆ. ಈ ಹಿನ್ನೆಲೆ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ದೇವಾಲಯಗಳ ಅಭಿವೃದ್ಧಿ ಮತ್ತು ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಭಕ್ತರಿಗೆ ಅನುಕೂಲವಾಗುವಂತೆ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಅಗಲಹಳ್ಳಿ ಸೇರಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಇನ್ನಷ್ಟು



ವೇಗಗೊಳಿಸಲಾಗುವುದು ಎಂದು ಹೇಳಿದರು.

ಗ್ರಾಮದಲ್ಲಿ ರಸ್ತೆ, ಕುಡಿಯುವ ನೀರು, ಒಳಚರಂಡಿ ಸೇರಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೂ ಹೆಚ್ಚಿನ ಗಮನ ಹರಿಸಲಾಗುತ್ತಿದೆ.

ಗ್ರಾಮಸ್ಥರ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.

ಗ್ರಾಮಸ್ಥರ ಬಹುದಿನಗಳ ಕನಸಾಗಿದ್ದ ದೇವಾಲಯ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿದ ಹಿನ್ನಲೆ ಗ್ರಾಮದಲ್ಲಿ ಸಂಭ್ರಮದ ವಾತಾವರಣ ಕಂಡುಬಂತು.

ಗ್ರಾಮಸ್ಥರು ಹಾಗೂ ಪಕ್ಷದ ಮುಖಂಡರ ಸಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿ ದೇವಾಲಯ ನಿರ್ಮಾಣ ಕಾಮಗಾರಿಗೆ ಅಧಿಕೃತವಾಗಿ ಚಾಲನೆ ನೀಡಲಾಯಿತು.

ಗ್ರಾಮದ ಮುಖಂಡರು, ದೇವಾಲಯ ಸಮಿತಿ ಸದಸ್ಯರು, ಪಕ್ಷದ ಕಾರ್ಯಕರ್ತರು ಹಾಜರಿದ್ದರು.

# ಮಾ. 18 ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ: ನಿಷೇಧಾಜ್ಞೆ ಜಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಮಾ.18 ರಿಂದ ಏ.2ರ ವರೆಗೆ ನಡೆಯಲಿದ್ದು ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಜಿಲ್ಲಾ ವ್ಯಾಪ್ತಿಯಲ್ಲಿ 78 ಪರೀಕ್ಷಾ ಕೇಂದ್ರ ತೆರೆಯಲಾಗಿದೆ. ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿನ ಜೆರಾಕ್ಸ್, ಸೈಬರ್, ಕಂಪ್ಯೂಟರ್ ಅಂಗಡಿಗಳನ್ನು ಮುಚ್ಚುವಂತೆ ಮತ್ತು ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆ ಕಾರ್ಯಕ್ಕೆ ನೇಮಕಗೊಂಡ ಅಧಿಕಾರಿಗಳು/ಸಿಬ್ಬಂದಿ ಹೊರತುಪಡಿಸಿ ಇತರರು ಯಾರು ನಿಷೇಧಿತ ಪ್ರದೇಶದೊಳಗೆ ಪ್ರವೇಶ ನಿಷೇಧಿಸಿದೆ. ವಿದ್ಯಾರ್ಥಿಗಳು ಒಂದು ಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರಕ್ಕೆ ಬರಬೇಕು. ಕಡ್ಡಾಯವಾಗಿ ಸಮವಸ್ತ್ರ ಧರಿಸುವುದು, ಪ್ರವೇಶ ಪತ್ರ ಮತ್ತು ಅಗತ್ಯ ಲೇಖನ ಸಾಮಾಗ್ರಿಗಳೊಂದಿಗೆ ಹಾಜರಾಗುವುದು, ವಿಶೇಷಚೇತನ ಅಭ್ಯರ್ಥಿಗಳಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ ಮತ್ತು ಅವಶ್ಯಕತೆ ಇರುವ/ಸೂಕ್ತ ದಾಖಲೆಗಳೊಂದಿಗೆ ಕೋರಿಕೆ ಮೇರೆಗೆ ಹೆಚ್ಚುವರಿ ಕಾಲಾವಾಕಾಶ ನೀಡಿದೆ, ಸಹಾಯಕ ಬರಹಗಾರರ ಸೌಲಭ್ಯಕ್ಕೆ ಒಂದು ದಿನ ಮುಂಚಿತವಾಗಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನು ಭೇಟಿ ಮಾಡಿ ವಿವರ ಸಲ್ಲಿಸುವುದು, ಪರೀಕ್ಷೆಯಲ್ಲಿ ಅವ್ಯವಹಾರ ನಡೆಸಿದಲ್ಲಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು, ಪರೀಕ್ಷಾಕೊಠಡಿಗೆ ಪರೀಕ್ಷೆಗೆ ಸಂಬಂಧಿಸದ ಯಾವುದೇ ಸಾಮಗ್ರಗಳನ್ನು ಒಯ್ಯುವಂತಿಲ್ಲ, ಪ್ರತಿ ಪರೀಕ್ಷೆ ಕೇಂದ್ರದಲ್ಲಿ ಪ್ರತಿ ಕೊಠಡಿಗೆ ಸಿ.ಸಿ ಟಿವಿ ಅಳವಡಿಸಿ ವೆಬ್ ಕಾಸ್ಟ್ ವ್ಯವಸ್ಥೆ ಮಾಡಲಾಗಿದೆ, ಎಸ್.ಎಸ್.ಎಲ್.ಸಿ ಪರೀಕ್ಷೆ ವಿಷಯಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆ ಹಾಗೂ ಸಹಾಯಕ್ಕಾಗಿ ವಿದ್ಯಾರ್ಥಿಗಳು ಮತ್ತು ಪೋಷಕರುಗಳು ತಾಲ್ಲೂಕು ಮತ್ತು ಜಿಲ್ಲಾ ಹಂತದ ಸಹಾಯವಾಣಿಯನ್ನು ಸಂಪರ್ಕ ಮಾಡಬಹುದುದಾಗಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಕರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಹಾಯವಾಣಿ 08172-268234 ಹಾಗೂ ಆಲೂರು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಇಸಿಓ ದಿವಾಕರ 9964663270. ಅರಕಗೂಡು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಇಸಿಓ ಯೋಗೇಶ 9632809685, ಅರಸೀಕೆರೆ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಇಸಿಓ ಹರೀಶ 9480139144, ಬೇಲೂರು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಇಸಿಓ ನವೀನ 8660948105, ಚನ್ನರಾಯಪಟ್ಟಣ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಇಸಿಓ ಶಿವಾನಂದ 9731703221, ಹಾಸನ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಇಸಿಓ ಭಾರತಿ 984412487, ಹೊಳೆನರಸೀಪುರ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಇಸಿಓ ರಾಮಚಂದ್ರಪ್ಪ 9845435332, ಸಕಲೇಶಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಬಿ.ಆರ್.ಪಿ ಸಿದ್ದೇಶ್ 9632025084, ಜಿಲ್ಲಾ ಸಹಾಯವಾಣಿ 08172-268234 ಉಪನಿರ್ದೇಶಕರ ಆಪ್ತ ಸಹಾಯಕರು ಧರ್ಮಪಾಲ್ 9481116958 ರವರಿಗೆ ಸಂಪರ್ಕಿಸುವಂತೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

# ಆರೋಗ್ಯ ಸೇವೆ ನೀಡುವ ನರ್ಸ್‌ಗೆ ಕಾನೂನು ಅರಿವು ಅವಶ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಆರೋಗ್ಯ ಸೇವೆಯಲ್ಲಿ ನರ್ಸ್‌ಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಯಾವುದೇ ರೋಗಿ ಚಿಕಿತ್ಸೆಗೆ ಬಂದಾಗ ಅವರನ್ನು ರಕ್ಷಿಸುವುದು ಮತ್ತು ಮಾನವೀಯತೆಯಿಂದ ಆರೈಕೆ ಮಾಡುವುದು ನರ್ಸ್‌ಗಳ ಪ್ರಮುಖ ಕರ್ತವ್ಯವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ತಿಳಿಸಿದರು.

ನಗರದ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಸಭಾಂಗಣದಲ್ಲಿ ಹಮಿಕೊಂಡಿದ್ದ ಕಾನೂನು ಅರಿವು ಹಾಗೂ ಸೈಬರ್ ಅಪರಾಧ ಕುರಿತು ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನರ್ಸಿಂಗ್ ವಿದ್ಯಾರ್ಥಿಗಳು ತಮ ವೃತ್ತಿಯ ಮಹತ್ವ ಮತ್ತು ಜವಾಬ್ದಾರಿಯನ್ನು ಸ್ಪಷ್ಟವಾಗಿ ಅರಿತು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು.

ನರ್ಸ್‌ಗಳ ಸೇವೆ ದಿನದ 24 ಗಂಟೆಗಳ ಸೇವೆಯಾಗಿದ್ದು, ತಾಳೆ, ಕರ್ತವ್ಯ ನಿಷ್ಠೆ ಮತ್ತು ಮಾನವೀಯತೆ ಇವರ ಪ್ರಮುಖ ಗುಣಗಳಾಗಿವೆ. ಯಾವುದೇ ಸಂದರ್ಭದಲ್ಲೂ ವ್ಯಕ್ತಿಯ ಹಕ್ಕುಗಳು ಉಲ್ಲಂಘನೆಯಾದರೆ ಅದನ್ನು ಕಾನೂನುಬದ್ಧವಾಗಿ ಎದುರಿಸಲು ನರ್ಸಿಂಗ್ ವಿದ್ಯಾರ್ಥಿಗಳು ಕಾನೂನು ಅರಿವು ಹೊಂದಿರಬೇಕು. ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬ ತತ್ವವನ್ನು ಮನದಲ್ಲಿಟ್ಟುಕೊಂಡು ಸೇವೆ ಸಲ್ಲಿಸುವುದು ಅಗತ್ಯ ಎಂದು ತಿಳಿಸಿದರು.

ನಮಗೆ ಕಾಣದ ಒಂದು ಶಕ್ತಿ ಇದೆ ಎಂದು ನಾವು ನಂಬುತ್ತೇವೆ. ಆದರೆ ನಮ ಪ್ರಯತ್ನವಿಲ್ಲದೆ ಎಲ್ಲವನ್ನೂ ದೇವರ ಮೇಲೆಯೇ ಬಿಟ್ಟರೆ ಗುರಿ ಸಾಧಿಸಲು ಸಾಧ್ಯವಿಲ್ಲ.

ಆದ್ದರಿಂದ ಪರಿಶ್ರಮ, ಶಿಸ್ತು ಮತ್ತು ಸಮರ್ಪಣೆಯೊಂದಿಗೆ ಕಾರ್ಯನಿರ್ವಹಿಸಿದಾಗ ಮಾತ್ರ ಯಶಸ್ಸು ದೊರೆಯುತ್ತದೆ. ಇಂದಿನ ಸಮಾಜದಲ್ಲಿ ಮಹಿಳೆಯರು ಪುರುಷರ ಸಮಾನವಾಗಿ ಎಲ್ಲಾ ಕ್ಷೇತ್ರಗಳಲ್ಲೂ ತಮ ಸಾಮರ್ಥ್ಯ ತೋರಿಸುತ್ತಿದ್ದಾರೆ. ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ ಎಂಬ ಮಾತನ್ನು ಉಲ್ಲೇಖಿಸಿ ಮಹಿಳೆ ಶಕ್ತಿ ಮತ್ತು ಧೈರ್ಯವನ್ನು ಸರಿಸಿದರು. ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂದು ಸಲಹೆ ನೀಡಿದರು.

ಮುಂದಿನ ಪೀಳಿಗೆಗೆ ಉತ್ತಮ ಪರಿಸರ ನೀಡಬೇಕಾದರೆ ಪ್ಲಾಸ್ಟಿಕ್ ಬಳ ತ್ಯಜಿಸುವುದು ಅಗತ್ಯವಾಗಿದೆ. ಹಸಿ ಕಸ ಮತ್ತು ಒಣಕಸವನ್ನು ಪ್ರತ್ಯೇಕ ಮಾಡಿ ವಿಲೇವಾರಿ ಮಾಡಬೇಕು. ಕಸ ತೆಗೆದುಕೊಂಡು ಹೋಗುವವರು ಸಹ ನಮಂತೆಯೇ ಮನುಷ್ಯರು ಎಂಬ ಮನೋಭಾವವನ್ನು ಪ್ರತಿಯೊಬ್ಬರೂ ಹೊಂದಬೇಕೆಂದು ತಿಳಿಸಿದರು.

ಇದೇ ವೇಳೆ ರಸ್ತೆ ಸುರಕ್ಷತೆ ಮತ್ತು ಕಾನೂನು ಪಾಲನೆ ಕುರಿತು ತಿಳಿಸಿ, 18 ವರ್ಷ ತುಂಬಿದ ಬಳಿಕವಷ್ಟೇ ಬೈಕ್ ಚಾಲನೆ ಮಾಡಬೇಕೆಂದರು. ಕಾನೂನು ಅರಿವಿದ್ದರೆ ಅನೇಕ ದುರ್ಘಟನೆ ತಡೆಯಬಹುದು. ಸಮಾಜದ ಕಟ್ಟಕಡೆಯವರಿಗೂ ನ್ಯಾಯ ದೊರಕಿಸುವುದು ಪ್ರಾಧಿಕಾರದ ಉದ್ದೇಶ. ಸಾಮಾನ್ಯ ಜನರಿಗೆ ಉಚಿತವಾಗಿ ಕಾನೂನು ಸೇವೆ ಒದಗಿಸಲಾಗುತ್ತಿದೆ. ಅಂತಿಮವಾಗಿ ವಿದ್ಯಾರ್ಥಿಗಳು ಸಮಾಜದ ಉತ್ತಮ ನಾಗರಿಕರಾಗಿ ಬೆಳೆದು, ಆರೋಗ್ಯ ಸೇವೆ ಮೂಲಕ ಜನರ ವಿಶ್ವಾಸ ಉಳಿಸಬೇಕು ಎಂದು ಕರೆ ನೀಡಿದರು.

ಡಿವೈಎಸ್ಪಿ ಸದಾಶಿವ, ಇನ್ಸ್‌ಪೆಕ್ಟರ್ ಪ್ರತಾಪ್, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಪ್ರಾಂಶುಪಾಲರಾದ ಸಿ.ಟಿ.ರತ್ನಮ, ಲಯನ್ಸ್ ಕ್ಲಬ್ ಅಧ್ಯಕ್ಷ ಹೆಚ್.ರಮೇಶ್, ಕಾರ್ಯದರ್ಶಿ ಸಿ.ಶಿವಸ್ವಾಮಿ, ಯೂತ್ ರೆಡ್ ಕ್ರಾಸ್ ಘಟಕದ ಜಯವೀಣಾ ಇದ್ದರು.

# ರಾಮನಾಥಪುರದಲ್ಲಿ ಹೊಗೆಸೊಪ್ಪು ಬೆಳೆಗಾರರ ಹೋರಾಟ ತೀವ್ರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ರಾಮನಾಥಪುರದಲ್ಲಿ ಹೊಗೆಸೊಪ್ಪು ಬೆಳೆಗಾರರು ವೈಜ್ಞಾನಿಕ ಬೆಲೆಗೆ ಆಗ್ರಹಿಸಿ ಶುಕ್ರವಾರ ತಂಬಾಕು ಬೇಲ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯ ರಸ್ತೆಗೆ ತಂಬಾಕು ಬೇಲ್ ತಂದು ರಸ್ತೆಗೆ ಸುರಿದರು. ನಂತರ ಪೆಟ್ರೋಲ್ ಹಾಕಿ ಬೆಂಕಿ ಹಚ್ಚಿ ಪ್ರತಿಭಟಿಸಿದರು. ಕೇಂದ್ರ ಸರ್ಕಾರ ತಂಬಾಕಿಗೆ ಶೇ. 40 ರಷ್ಟು ಜಿಎಸ್‌ಟಿ ವಿಧಿಸಿದ್ದರಿಂದ ಹರಾಜು ಪ್ರಕ್ರಿಯೆ ಸಂಪೂರ್ಣ ಸ್ಥಗಿತಗೊಂಡಿತ್ತು. ನಂತರ ಜಿಎಸ್‌ಟಿ ನಿರ್ಧಾರದಿಂದ ಹಿಂದೆ ಸರಿಯಲಾಯಿತಾದರೂ ಮಾರುಕಟ್ಟೆ ಸಹಜ ಸ್ಥಿತಿಗೆ ಬಂದಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು. ಬೆಳೆಗಾರರಿಗೆ ಅನ್ಯಾಯವಾಗುತ್ತಿರುವ ಕುರಿತು ಸಂಸದ ಶ್ರೇಯಸ್ ಪಟೇಲ್, ಶಾಸಕ ಎ.ಮಂಜು ಅವರ ಗಮನಕ್ಕೆ ತಂದರೂ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸಿಲ್ಲವೆಂದು ದೂರಿದರು.

# ಆತ್ಮ ಸಾಕ್ಷಾತ್ಕಾರವೇ ಎಲ್ಲ ಧರ್ಮಗಳ ಅಂತಿಮ ಗುರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಆಲೂರು: ಧರ್ಮಗಳ, ಜಾತಿಗಳ ಭೇದವಿಲ್ಲದೆ ಸೌಹಾರ್ದತೆ, ಸಹೋದರತ್ವ ಮತ್ತು ಪರಸ್ಪರ ಗೌರವವನ್ನು ಬೆಳೆಸುವುದೇ ಇಫ್ತಾರ್ ಸೌಹಾರ್ದ ಕೂಟದ ಮುಖ್ಯ ಉದ್ದೇಶ ಎಂದು ಸಾಹಿತಿ ಕೊಟ್ರೇಶ್ ಎಸ್. ಉಪ್ಪಾರ್ ಹೇಳಿದರು.

ತಾಲ್ಲೂಕು ಜಮಾಅತೆ ಇಸ್ಲಾಮೀ ಹಿಂದ್ ಸಂಘಟನೆ ಪಟ್ಟಣದ ದೊಡ್ಡಿ ಬೀದಿ ಪ್ರಕೃತಿ ನಗರದಲ್ಲಿರುವ ಜಬಿವುಲ್ಲಾ ಗೃಹದಲ್ಲಿ ಹಮಿಕೊಂಡಿದ್ದ ಇಫ್ತಾರ್ ಸೌಹಾರ್ದ ಕೂಟದ ಉದ್ಘಾಟನೆ ಮಾಡಿ ಮಾತನಾಡಿದರು. ಸ್ವಾಮಿ ವಿವೇಕಾನಂದರು ಹೇಳುವಂತೆ ಇಸ್ಲಾಮಿನ ದೇಹ, ವೇದಾಂತದ ಮೆದುಳು ಸೇರಿದಾಗ ಮಾತ್ರ ಭಾರತದ ಔನತ್ಯ ಸಾಧ್ಯ. ಎಲ್ಲಾ ಧರ್ಮಗಳ ಅಂತಿಮ ಗುರಿ ಮಾನವ ಜೀವನದ ಸಾಕ್ಷಾತ್ಕಾರ ಮುಕ್ತಿಯಾಗಿದೆ. ಎಲ್ಲಾ ಧರ್ಮಗಳು ಪ್ರೀತಿ, ಸ್ನೇಹ, ಸಹೋದರತೆ, ತ್ಯಾಗ, ಸಹಕಾರ ಮುಂತಾದ ಉನ್ನತ ಗುಣ ಧರ್ಮಗಳನ್ನೇ ಬೋಧಿಸುತ್ತವೆ. ಇಸ್ಲಾಂ ಧರ್ಮ, ಕ್ರಿಶ್ಚಿಯನ್ ಧರ್ಮ, ಲಿಂಗಾಯತ ಧರ್ಮ ಇವೆಲ್ಲವೂ ಏಕದೇವೋಪಾಸನೆಗೆ ಒತ್ತು ನೀಡಿ ಕಾಯಕ ಸಿದ್ಧಾಂತ, ಸಹಕಾರ ಗುಣಗಳಿಗೆ, ದಾಸೋಹ ಗುಣಗಳಿಗೆ ಹೆಚ್ಚು ಒತ್ತು ನೀಡಿದವು. ಮೊಹಮದ್ ಪೈಗಂಬರ್, ಏಸುಕ್ರಿಸ್ತ, ಬುದ್ಧ, ಬಸವಣ್ಣ ಮುಂತಾದ ಮಹಾಮಾನವತಾವಾದಿಗಳೆಲ್ಲರೂ ಮನುಷ್ಯನ ಬದುಕಿನ ಔನತ್ಯಕ್ಕಾಗಿ ಬೇಕಾದ ಗುಣ ಧರ್ಮಗಳನ್ನೇ ಬೋಧಿಸಿದ್ದಾರೆ. ಧರ್ಮಾಂಧತೆಯ ಮಡುವಿನಲ್ಲಿ ಒದ್ದಾಡುತ್ತಿರುವ ವರ್ತಮಾನದಲ್ಲಿ ಧರ್ಮಾತೀತ, ಜಾತ್ಯಾತೀತ ಮನೋಭಾವಗಳು, ಸೌಹಾರ್ದಭಾವ ಅತಿಮುಖ್ಯವಾಗಿವೆ ಎಂದರು.

ಜಮಾ ಅತೆ ಇಸ್ಲಾಮೀ ಹಿಂದ್ ಚಿಕ್ಕಮಗಳೂರು ಜಿಲ್ಲಾಧ್ಯಕ್ಷ ರಿಜ್ವಾನ್ ಖಾಲಿದ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಫ್ತಾರ್ ಕೂಟವು ಮುಸ್ಲಿಮರು ಪವಿತ್ರ ರಂಜಾನ್ ಮಾಸದಲ್ಲಿ ಸೂರ್ಯಾಸ್ತದ ನಂತರ ತಮ ದಿನದ ಉಪವಾಸವನ್ನು ಹಂಚಿಕೊಡು ಮುರಿಯುವ ಸೌಹಾರ್ದಯುತ ಕೂಟವಾಗಿದೆ. ದೇಶದಾದ್ಯಂತ ಈ ಕೂಟಗಳನ್ನು ಅರ್ವಧರ್ಮ ಸೌಹಾರ್ದತೆ, ಶಾಂತಿ ಮತ್ತು ಪ್ರೀತಿಯ ಸಂಕೇತವಾಗಿ ಆಯೋಜಿಸಲಾಗುತ್ತದೆ. ಸಹಜವಾಗಿ ವಿವಿಧ ಧರ್ಮದ ಸಮಾನ ಮನಸ್ಕರು ಭಾಗಿಯಾಗಿ ಆಚರಿಸಿ ಧರ್ಮಗಳ ಸಾರ, ಐಕ್ಯತೆ ಅರಿಯುವುದಾಗಿದೆ ಎಂದರು.

ಆಲೂರು ಬಿಲಿವಿರ್ಸ್‌ಚರ್ಚ್ ಫಾ. ಡಿ.ಸಿ. ಬಸವರಾಜ್ ಮಾತನಾಡಿ ಭಾರತವೊಂದು ಬಹುಧರ್ಮೀಯ ರಾಷ್ಟವಾದ್ದರಿಂದ ಎಲ್ಲಾ ಧರ್ಮಗಳ ಅನ್ಯೋನ್ಯತೆ, ಐಕ್ಯತೆ ಮುಖ್ಯ. ಈ ದಿಸೆಯಲ್ಲಿ ಪರಸ್ಪರ ಬ್ರಾತೃತ್ವ, ಸಹಕಾರ, ಭಾವೈಕ್ಯತೆ ವೃದ್ಧಿಸುವ ಹಿನ್ನೆಲೆಯಲ್ಲಿ ಇಂತಹ ಕೂಟಗಳು ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತವೆ. ಕಾರ್ಯಕ್ರಮದಲ್ಲಿ ಮೊಹಮದ್ ಜಬಿಉಲ್ಲ, ಜಾಫರ್ ಸೇರಿದಂತೆ ವಿವಿಧ ಧರ್ಮದ ಮುಖಂಡರು ಉಪಸ್ಥಿತರಿದ್ದರು.

# ಯಳವಾರೆ ಹುಚ್ಚಮ್ಮ ಜಾತ್ರಾ ಮಹೋತ್ಸವಕ್ಕೆ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ಸುತ್ತ ಹತ್ತಾರು ಗ್ರಾಮಗಳಿಗೆ ಗ್ರಾಮ ದೇವತೆಯಾಗಿರುವ ಯಳವಾರೆ ಹುಚ್ಚಮ ದೇವಿಯ ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆಯಿತು.

ಜಾತ್ರಾ ಮಹೋತ್ಸವಕ್ಕೂ ಮುನ್ನ ದೇವಿಯು ತನ್ನ ಒಕ್ಕಲು ಗ್ರಾಮಗಳಿಗೆ ಹೋಗಿ ಭಕ್ತರಿಂದ ಮಡಿಲಕ್ಕಿ ಸ್ವೀಕರಿಸುವುದು ತಲಾತಲಾಂತರದಿಂದ ನಡೆದು ಬಂದ ಸಂಪ್ರದಾಯವಾಗಿದ್ದು ಇಂದಿಗೂ ಮುಂದೊರೆಯುತ್ತಿದೆ.

ಮಡಿಲಕ್ಕಿಗೆ ಮನೆ ದೇವತೆ ಆಗಮಿಸುವ ಸಂಪ್ರದಾಯವನ್ನು ಅರಿತಿರುವ ಗ್ರಾಮಸ್ಥರು ದೇವಿಯು ಗ್ರಾಮ ಪ್ರವೇಶಿಸುವ ಮುನ್ನ ದಿನವೇ ತಮ ಗ್ರಾಮಗಳನ್ನು ತಳಿರು ತೋರಣಗಳಿಂದ ಶೃಂಗರಿಸಿ ಶ್ರದ್ಧಾ ಭಕ್ತಿಯೊಂದಿಗೆ ಬರಮಾಡಿಕೊಂಡರೆ ಮಹಿಳೆಯರು ತಮ ಮನೆಯ ಅಂಗಳವನ್ನು ಸ್ವಚ್ಛಗೊಳಿಸಿ ರಂಗೋಲಿ ಬಿಡಿಸಿ ಮನೆ ಬಾಗಿಲಿಗೆ ಬರುವ ದೇವಿಗೆ ಶ್ರದ್ಧಾಭಕ್ತಿಯೊಂದಿಗೆ ಉಡಿ ತುಂಬಿ ದೇವಿಯ ಆಶೀರ್ವಾದ ಪಡೆದುಕೊಳ್ಳುವುದು ಅವರ ಭಕ್ತಿ ಭಾವಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಜೋಡಿ ರಥೋತ್ಸವ: ಗ್ರಾಮ ದೇವತೆಯ ಜಾತ್ರಾ ಮಹೋತ್ಸವವೆಂದರೆ ಕ್ಷೇತ್ರ ದೇವತೆಯನ್ನು ಹೊತ್ತು ಮೆರೆಸುವುದು ನಾವು ಕಂಡಿದ್ದೇವೆ ಆದರೆ ಹುಚ್ಚಮ ದೇವಿಯ ಜಾತ್ರಾ ಮಹೋತ್ಸವದಲ್ಲಿ ಹುಚ್ಚಮ ದೇವಿಯ ರಥೋತ್ಸವದಲ್ಲಿ ರಾಜ್ಯದ ಲಕ್ಷಾಂತರ ಭಕ್ತರ ಆರಾಧ್ಯ ದೈವ ವಾಗಿರುವ ಜೇನುಕಲ್ ಸಿದ್ದೇಶ್ವರ ಸ್ವಾಮಿಯ ರಥೋತ್ಸವವು ಸಹ ಇಲ್ಲಿ ನಡೆಯುತ್ತದೆ. ಹಾಗಾಗಿ ಒಂದೇ ಜಾತ್ರಾ ಮಹೋತ್ಸವದಲ್ಲಿ ಎರಡು ರಥ ತೇರುಗಳು ಅರಿಯುವುದನ್ನ ಇಲ್ಲಿ ಕಾಣಬಹುದು ಹಾಗಾಗಿ ಜೋಡಿ ರಥೋತ್ಸವ ಎಂದೇ ಹುಚ್ಚಮ ದೇವಿಯ ಜಾತ್ರಾ ಮಹೋತ್ಸವ ಪ್ರಸಿದ್ಧಿಯಾಗಿದೆ.

ಬಾಡೂಟ ನಿಷೇಧ: ಗ್ರಾಮ ದೇವತೆಗಳ ಜಾತ್ರಾ ಮಹೋತ್ಸವ ಎಂದರೆ ರಥೋತ್ಸವಕ್ಕೂ ಮುನ್ನ ದಿನ ಅಥವಾ ಮಾರನೇ ದಿನ ಭರ್ಜರಿ ಬಾಡೂಟ ನಡೆಯುತ್ತದೆ. ಆದರೆ ಹುಚ್ಚಮ ದೇವಿಯ ಜಾತ್ರಾ ಮಹೋತ್ಸವದಲ್ಲಿ ಬಾಡೂಟ ನಿಷೇಧ ಏಕೆಂದರೆ ಜೇನುಕಲ್ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವುದರಿಂದ ಗ್ರಾಮಸ್ಥರು ಶ್ರದ್ಧಾ ಭಕ್ತಿಯೊಂದಿಗೆ ನಡೆದುಕೊಳ್ಳುತ್ತಾರೆ ಅಲ್ಲದೆ ಮಡಿ ಮೈಲಿಗೆ ಬಗೆ ಮುಂಜಾಗ್ರತೆ ವಹಿಸುತ್ತಾರೆ. ದೇವಿಗೆ ಮಾಂಸಹಾರ ನೈವೇದ್ಯವನ್ನು ತಿಂಗಳ ಬಾನದಂದು ಭಕ್ತರು ಸಮರ್ಪಿಸುತ್ತಾರೆ.

ಈ ಬಾರಿಯ ದೇವಿಯ ಜಾತ್ರಾ ಮಹೋತ್ಸವವು ಏ. 7 ರಿಂದ 9ರ ವರೆಗೆ ನಡೆಯಲಿದ್ದು ಈಗಾಗಲೇ ದೇವಾಲಯದ ಅಭಿವೃದ್ಧಿ ಸಮಿತಿ ಸಕಲ ಸಿದ್ಧತೆಯಲ್ಲಿ ತೊಡಗಿದೆ.

# ಹೇಮಾವತಿ ಭೂ ಸಂತ್ರಸ್ತರಿಗೆ ನ್ಯಾಯ ಒದಗಿಸಲು ಶಾಸಕರ ಒತ್ತಾಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಆಲೂರು ತಾಲೂಕು ಭೈರಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬ್ಯಾಬ ಗ್ರಾಮದ ಸರ್ವೆ ನಂ.1 ರಲ್ಲಿ 50 ವರ್ಷಗಳಿಂದ ವಾಸವಿರುವ ಗೊರೂರು ಹೇಮಾವತಿ ಜಲಾಶಯದ ಮುಳುಗಡೆ ಸಂತ್ರಸ್ತರ ಭೂಮಿಗಳ ದುರಸ್ತು ಮಾಡಿಕೊಟ್ಟು, ಸಂತ್ರಸ್ತರಿಗೆ ಅನುಕೂಲ ಮಾಡಿಕೊಡಬೇಕೆಂದು ಶಾಸಕ ಸಿಮೆಂಟ್ ಮಂಜು ಸದನದಲ್ಲಿ ಒತ್ತಾಯಿಸಿದರು.

ಹೇಮಾವತಿ ಅಣೆಕಟ್ಟೆ ನಿರ್ಮಾಣದ 1970-72ನೇ ಸಾಲಿನಲ್ಲಿ ಮುಳುಗಡೆ ಸಂತ್ರಸ್ತರನ್ನು ಬ್ಯಾಬ ಗ್ರಾಮಕ್ಕೆ ಸ್ಥಳಾಂತರಿಸಲಾಯಿತು. ಆದರೆ, 50 ವರ್ಷ ಕಳೆದರೂ ಅಲ್ಲಿರುವ ಜನರು ತಮ ಆಸ್ತಿಯನ್ನು ದುರಸ್ತು ಮಾಡಿಸಿಕೊಳ್ಳಲಾದೆ, ಬೇರೆಯವರಿಗೆ ವರ್ಗಾಯಿಸಲೂ ಸಾಧ್ಯವಾಗದೆ ಪರದಾಡುವಂತಾಗಿದೆ ಎಂದು ಹೇಳಿದರು.

ತಮ ಜಮೀನಿಗೆ ಬ್ಯಾಂಕ್‌ನಿಂದ ಸಾಲಸೌಲಭ್ಯ ಪಡೆದುಕೊಳ್ಳಲು ಆಗುತ್ತಿಲ್ಲ. 250 ರಿಂದ 300 ಕುಟುಂಬಗಳು ಈ ಸಮಸ್ಯೆಗೆ ಸಿಲುಕಿಕೊಂಡಿದ್ದಾರೆ. ಜಲಾಶಯ ನಿರ್ಮಾಣಕ್ಕಾಗಿ ಭೂಮಿ ಕಳೆದುಕೊಂಡರೂ ಇನ್ನೂ ಅವರನ್ನು ಅಲೆದಾಡಿಸುವ ಕೆಲಸವಾಗುತ್ತಿದೆ. ಇದ್ದ ಜಮೀನು ಕಳೆದುಕೊಂಡು, ಸಿಕ್ಕಿರುವ ಜಮೀನಿಗೆ ಅಗತ್ಯ ದಾಖಲೆಗಳು ಸಿಗದೆ ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಸರ್ಕಾರ ಮಧ್ಯ ಪ್ರವೇಶ ಮಾಡಿ ದುರಸ್ತು ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಇದಕ್ಕೆ ಉತ್ತರ ನೀಡಿದ ಸಚಿವ ಪ್ರಿಯಾಂಕ್ ಖರ್ಗೆ ಅವರು, ಹೇಮಾವತಿ ಭೂಸಂತ್ರಸ್ತರಿಗೆ ಭೈರಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬ್ಯಾಬ ಅರಣ್ಯ ಪ್ರದೇಶದಲ್ಲಿ ಭೂಮಿ ಕಾಯ್ದಿರಿಸಿ ಆದೇಶ ಹೊರಡಿಸಿರುವ ಬಗ್ಗೆ ಮೈಸೂರು ಅಥವಾ ಕರ್ನಾಟಕ ರಾಜ್ಯಪತ್ರ ಲಭ್ಯವಿಲ್ಲ. ಆದರೂ, ಶಾಸಕ ಆಸಕ್ತಿಯ ಮೇರೆಗೆ ಈಗಾಗಲೇ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಆದೇಶದ ಮೇರೆಗೆ ತಹಶೀಲ್ದಾರ್, ಉಪವಿಭಾಗಾಧಿಕಾರಿ ವರದಿ ಅನ್ವಯ ದಾಖಲೆಗಳನ್ನು ಪಡೆದು, ನೈಜ ಪರಿಸ್ಥಿತಿಯ ಅವಲೋಕನ, ದಾಖಲೆಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದೆ. ವರದಿ ಬಂದ ಬಳಿಕ ನೈಜ ಮಂಜೂರಿದಾರರಿಗೆ ನ್ಯಾಯ ಒದಗಿಸಲಾಗವುದು ಎಂದು ಭರವಸೆ ನೀಡಿದರು.

ಈ ವೇಳೆ ಮಧ್ಯ ಪ್ರವೇಶ ಮಾಡಿದ ಶಾಸಕ ಸಿಮೆಂಟ್ ಮಂಜು, ಅರಣ್ಯ ಇಲಾಖೆ ಈಗಾಗಲೇ ವರದಿ ನೀಡಿದೆ. ಆದ್ದರಿಂದ ಶೀಘ್ರ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

# ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ: ಮುರಳಿ ಮೋಹನ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಸಕಲೇಶಪುರ: ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸುವ ನಿಟ್ಟಿನಲ್ಲಿ ಪೋಷಕರು ಮುಂದಾಗಬೇಕು ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಮುರಳಿ ಮೋಹನ್ ಹೇಳಿದರು.

ತಾಲೂಕಿನ ರಾಜೇಂದ್ರಪುರ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಸುವರ್ಣ ಮಹೋತ್ಸವದಲ್ಲಿ ಮಾತನಾಡಿ, ಸರ್ಕಾರ ಜಾರಿಗೆ ತಂದಿರುವ ವಿವಿಧ ಗ್ಯಾರಂಟಿ ಯೋಜನೆಗಳು ಸಾಮಾನ್ಯ ಜನರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ ಎಂದು ಹೇಳಿದರು.

ಶಿಕ್ಷಣ ಕ್ಷೇತ್ರಕ್ಕೂ ಸರ್ಕಾರ ವಿಶೇಷ ಆದ್ಯತೆ ನೀಡುತ್ತಿದ್ದು, ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಅನೇಕ ಯೋಜನೆಗಳು ಜಾರಿಯಾಗಿವೆ. ಈ ಸೌಲಭ್ಯಗಳನ್ನು ಪೋಷಕರು ಹಾಗೂ ವಿದ್ಯಾರ್ಥಿಗಳು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಶಾಲೆಗಳೇ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಕೇಂದ್ರಗಳಾಗಿದ್ದು, ಅವುಗಳ ಅಭಿವೃದ್ಧಿಗೆ ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ. ಗ್ರಾಮಸ್ಥರು, ಹಳೆಯ ವಿದ್ಯಾರ್ಥಿಗಳು ಹಾಗೂ ಎಸ್‌ಡಿಎಂಸಿ ಸದಸ್ಯರು ಶಾಲೆಯ ಪ್ರಗತಿಗೆ ಕೈಜೋಡಿಸಿದರೆ ಶಾಲೆಗಳು ಇನ್ನಷ್ಟು ಅಭಿವೃದ್ಧಿಯಾಗಲು ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರತಿಭಾ ಮಂಜುನಾಥ್, ಎಸ್‌ಡಿಎಂಸಿ ಶಾಲೆಯ ಸರ್ವತೋಮುಖ ಪ್ರಗತಿಗಾಗಿ ರಚಿಸಲ್ಪಟ್ಟ ಸಮಿತಿಯಾಗಿದ್ದು, ಶಾಲೆಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಪ್ರಮುಖ ಜವಾಬ್ದಾರಿ ಈ ಸಮಿತಿಯದ್ದಾಗಿದೆ ಎಂದು ತಿಳಿಸಿದರು. ಗ್ರಾಮದ ಪ್ರತಿಯೊಬ್ಬ ಎಸ್‌ಡಿಎಂಸಿ ಸದಸ್ಯರೂ ತಮ ಶಾಲೆಯ ಅಭಿವೃದ್ಧಿಯತ್ತ ಆಸಕ್ತಿಯಿಂದ ಗಮನಹರಿಸಿ ಉತ್ತಮ ಶಿಕ್ಷಣ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಅವರು ಮನವಿ ಮಾಡಿದರು.

ನಮೂರ ಶಾಲೆ ನಮ ಶಾಲೆ ಎಂಬ ಭಾವನೆಯೊಂದಿಗೆ ಶಾಲೆಯೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡು ಅದರ ಆಗುಹೋಗುಗಳಿಗೆ ಸ್ಪಂದಿಸಬೇಕು. ಶಾಲೆಗೆ ಅಗತ್ಯವಿರುವ ಸೌಕರ್ಯಗಳನ್ನು ಜನಪ್ರತಿನಿಧಿಗಳ ಗಮನಕ್ಕೆ ತಂದು ಅವರ ಅನುದಾನಗಳನ್ನು ಪಡೆದು ಶಾಲೆಗಳನ್ನು ಅಭಿವೃದ್ಧಿಪಡಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ರಾಜೇಂದ್ರಪುರ ಶಾಲೆಯ ಅಭಿವೃದ್ಧಿಯಲ್ಲಿ ಎಸ್‌ಡಿಎಂಸಿ ಸದಸ್ಯರು, ಹಳೆಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರ ಸಹಕಾರ ಗಮನಾರ್ಹವಾಗಿದ್ದು, ಇದು ಇತರ ಶಾಲೆಗಳಿಗೆ ಮಾದರಿಯಾಗಿದೆ ಎಂದು ಅವರು ಹೇಳಿದರು.

ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಆರ್.ಎಲ್. ದೇವರಾಜ್ ಮಾತನಾಡಿ, ನಮ ಕಾಲದಲ್ಲಿ ಪಠ್ಯಾಭ್ಯಾಸಕ್ಕಿಂತ ಮಾನವೀಯ ಸಂಬಂಧಗಳಿಗೆ ಹೆಚ್ಚು ಮಹತ್ವ ಇತ್ತು. ಇಂದು ಗುರು ಮಾಹಿತಿ ನೀಡುವ ವ್ಯವಸ್ಥೆಯಾಗಿದ್ದು, ಶಿಷ್ಯ ಮಾಹಿತಿ ಸಂಗ್ರಹಿಸುವ ವ್ಯವಸ್ಥೆಯಾಗುತ್ತಿರುವಂತಾಗಿದೆ. ಇವರಿಬ್ಬರ ನಡುವೆ ನಿಕಟ ಬಾಂಧವ್ಯ ಕಡಿಮೆಯಾಗುತ್ತಿದ್ದು, ಪ್ರೀತಿ ಹಾಗೂ ಆತ್ಮೀಯತೆ ಕುಂದುತ್ತಿರುವುದು ಎಲ್ಲವೂ ಯಾಂತ್ರಿಕವಾಗುತ್ತಿರುವಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು. ಈ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದ ಪುಟ್ಟಸ್ವಾಮಿಯವರನ್ನು ನಾವು ಎಂದಿಗೂ ಮರೆಯುವುದಿಲ್ಲ ಎಂದು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷ ಚನ್ನಕೇಶವ, ಮುರಾಜಿ ದೇಸಾಯಿ ವಸತಿ ಶಾಲೆ ಬ್ಯಾಕರವಳ್ಳಿಯ ಪ್ರಾಂಶುಪಾಲರಾದ ಶತೇಂದ್ರಕುಮಾ,ರ್ ಕ.ರಾ.ಸ.ನೌ. ಸಂಘದ ತಾಲೂಕು ಅಧ್ಯಕ್ಷ ಶಾಂತ, ಕೆ.ಎಸ್.ಇ.ಜಿ.ಎ ರಾಜ್ಯ ಸಂಘಟನಾ ಕಾರ್ಯದರ್ಶಿ ವೈ.ಎಸ್. ತಮ್ಮಣ್ಣ ಶೆಟ್ಟಿ, ಮಾಜಿ ಗ್ರಾಮ ಪಂಚಾಯಿತಿ ಸದಸ್ಯೆ ಸೌಜನ್ಯ ಸುರೇಶ್, ಬಸವೇಶ್ವರ ಜಾತ್ರಾ ಸಮಿತಿ ಅಧ್ಯಕ್ಷ ಕುಮಾರ್, ಸಮೂಹ ಸಂಪನೂಲ ವ್ಯಕ್ತಿ ನಿರಂಜನ್ ಮೂರ್ತಿ, ಶಾಲಾ ಮುಖ್ಯ ಶಿಕ್ಷಕ ಪುಟ್ಟೇಗೌಡ, ಸಹ ಶಿಕ್ಷಕ ತ್ರಿಲೋಚನ್, ಹಿರಿಯ ವಿದ್ಯಾರ್ಥಿ ಬಳಗದ ಉಪಾಧ್ಯಕ್ಷ ಸುರೇಶ್, ಕಾರ್ಯದರ್ಶಿ ಪ್ರಕಾಶ್, ಖಜಾಂಚಿ ಚಂದ್ರು ಇತರರಿದ್ದರು.

# ಪ್ರತ್ಯೇಕ ಪ್ರಕರಣ: ಗಾಂಜಾ ಸೇವಿಸಿದ್ದ ಮೂವರ ಬಂಧನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಚನ್ನರಾಯಪಟ್ಟಣ ತಾಲ್ಲೂಕು ಅಕ್ಕನಹಳ್ಳಿ ಕೂಡು ರಸ್ತೆಯಲ್ಲಿ ನುಗ್ಗೇಹಳ್ಳಿ ಪೊಲೀಸರು ಗಸ್ತು ತಿರುಗುತ್ತಿದ್ದಾಗ ವ್ಯಕ್ತಿಯೊಬ್ಬನನ್ನು ಸಂಶಯದಡಿ ವಿಚಾರಿಸಿದಾಗ ಗಾಂಜಾ ಸೇವಿಸಿರುವುದು ದೃಢಪಟ್ಟಿದೆ. ಬಿ.ಎನ್. ಅನಿಲ್ ಎಂಬಾತ ಆರೋಪಿಯಾಗಿದ್ದು, ಬಂಧಿಸಲಾಗಿದೆ. ನುಗ್ಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ರಾಮನಾಥಪುರ ತೂಗು ಸೇತುವೆ ಬಳಿ ಗಾಂಜಾ ಸೇವಿಸಿ ಓಡಾಡಿಕೊಂಡಿದ್ದ ಭರತ್ ಹಾಗು ಆನಂದನ್ ಎಂಬುವವರನ್ನು ಕೊಣನೂರು ಠಾಣೆ ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ.

# ಈಜು ಸ್ಪರ್ಧೆ: ವಿದ್ಯಾರ್ಥಿನಿ ಅದ್ವಿಕ ಗೌಡ ಸಾಧನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಗರದ ಮಿಲೇನಿಯಮ್ ವರ್ಲ್ಡ್ ಶಾಲೆಯ ಒಂದನೇ ತರಗತಿ ವಿದ್ಯಾರ್ಥಿನಿ ಅದ್ವಿಕ ಗೌಡ ಅವರು ರಾಜ್ಯ ಮಟ್ಟದ ಈಜು ಸ್ಪರ್ಧೆಯಲ್ಲಿ ಒಟ್ಟು 28 ಪದಕ, 1 ಟ್ರೋಫಿ, 28 ಪ್ರಮಾಣ ಪತ್ರ ಪಡೆದು ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ದಾಖಲೆಗೆ ಪಾತ್ರರಾಗಿದ್ದಾರೆ.

ಎಸ್.ಕೆ.ಅಕಾಡೆಮಿ ತರಬೇತುದಾರ ಸೈಯದ್ ಅವರು ತರಬೇತಿ ನೀಡಿದ್ದರು. ವಿದ್ಯಾರ್ಥಿ ಸಾಧನೆಗೆ ಶಾಲೆಯ ಪ್ರಾಂಶುಪಾಲ, ಶಿಕ್ಷಕರು ಹಾಗು ಪೋಷಕರು ಅಭಿನಂದಿಸಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಮಾರ್ಚ್-14

**1931:** ಭಾರತದ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್, ರಾಜಗುರು, ಸುಖದೇವ್ ಅವರಿಗೆ ಬ್ರಿಟಿಷ್ ಸರ್ಕಾರ ಮರಣದಂಡನೆ ವಿಧಿಸಿತು.

### ಜನನ

**1879:** ಖ್ಯಾತ ಭೌತಶಾಸ್ತ್ರಜ್ಞ ಆಲ್ಬರ್ಟ್ ಐನ್‌ಸ್ಟೈನ್
**1933:** ಭಾರತದ ಪ್ರಸಿದ್ಧ ನಟ ಮನುಜ್ ಕುಮಾರ್

### ಮರಣ

**1883:** ಜರ್ಮನ್ ತತ್ವಜ್ಞ ಮತ್ತು ಸಮಾಜವಾದಿ ಚಿಂತಕ ಕಾರ್ಲ್ ಮಾರ್ಕ್ಸ್
**2018:** ಖ್ಯಾತ ವಿಜ್ಞಾನಿ ಸ್ಟೀಫನ್ ಹಾಕಿಂಗ್

# ಎಲ್‌ಪಿಜಿ ಸಿಲಿಂಡರ್ ಅಭಾವ ವದಂತಿ: ಕ್ರಮದ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಜಿಲ್ಲೆಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗೆ ಸಮಸ್ಯೆ ಇಲ್ಲವಾದರೂ ವದಂತಿಯಿಂದ ಜನರು ಕಂಗೆಡುತ್ತಿದ್ದಾರೆ. ಈ ಕುರಿತು ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಅರುಣ್‌ಕುಮಾರ್ ಸಂಗಾವಿ ಎಚ್ಚರಿಕೆ ನೀಡಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಭೀತಿಯಿಂದ ಏಜೆನ್ಸಿಗಳ ಮುಂದೆ ಸರತಿ ಸಾಲಿನಲ್ಲಿ ನಿಲ್ಲುತ್ತಿದ್ದಾರೆ. ಸಿಲಿಂಡರ್ ಸಿಗುತ್ತಿಲ್ಲವೆಂದು ವದಂತಿ ಹರಡಲಾಗುತ್ತಿದೆ. ಸಿಲಿಂಡರ್ ಖರೀದಿಸಿದ 25 ದಿನಗಳ ವರೆಗೆ ಬುಕ್ಕಿಂಗ್ ಆಗುವುದಿಲ್ಲ. ಆದರೆ, ಕೆಲವರು ಮನೆಯಲ್ಲಿ ಸಿಲಿಂಡರ್ ಇದ್ದರೂ ಭೀತಿಯಿಂದ ಬುಕ್ಕಿಂಗ್‌ಗೆ ಮುಗಿಬೀಳುತ್ತಿದ್ದಾರೆ. ಜಿಲ್ಲೆಯಲ್ಲಿ 34 ಗ್ಯಾಸ್ ಏಜೆನ್ಸಿಗಳಿದ್ದು ಎಂದಿನಂತೆ ಸಿಲಿಂಡರ್‌ಗಳು ಸಮರ್ಪಕವಾಗಿ ಬರುತ್ತಿವೆ. ಅದೇ ರೀತಿ ವಿತರಣೆಯೂ ಆಗುತ್ತಿದೆ. ಯುದ್ಧದ ನೆಪದಲ್ಲಿ ಕೆಲವರು ಜನರಲ್ಲಿ ಭಯ ಹುಟ್ಟಿಸುತ್ತಿದ್ದಾರೆ ಎಂದರು.

### ಹೋಟೆಲ್‌ಗಳು ಬಂದ್

ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ನಗರದ ಕೆಲವು ಹೋಟೆಲ್ ಅದರಲ್ಲೂ ಮಾಂಸಾಹಾರಿ ಹೋಟೆಲ್ ಬಂದ್ ಆಗುವ ಪರಿಸ್ಥಿತಿ ನಿರ್ಮಾಣವಾಗಿದೆ. ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆ ಇರದ ಕಾರಣ ನಮ ಹೋಟೆಲ್‌ನ್ನು ತೆರೆದಿರುವುದಿಲ್ಲ ಎಂದು ಬಾಗಿಲಿಗೆ ಚೀಟಿ ಅಂಟಿಸಲಾಗಿದೆ. ದೊಡ್ಡ ದೊಡ್ಡ ಹೋಟೆಲ್‌ಗಳ ಸ್ಥಿತಿಯೂ ಇದೇ ಆಗಿದೆ. ಅವಕಾಶ ಇರುವವರು ಸೌದೆ ಒಲೆ ಮೊರೆ ಹೋಗಿದ್ದಾರೆ. ಪರ್ಯಾಯ ಅವಕಾಶ ಇಲ್ಲದವರು ಬಾಗಿಲು ಮುಚ್ಚಿದ್ದಾರೆ.

ಉಳಿದಂತೆ ಕೆಲ ಹೋಟೆಲ್ ಮಾಲೀಕರು ಹಾಗೂ ಫುಡ್‌ಕೋರ್ಟ್‌ನವರು ಒಂದು ದಿನ ವ್ಯಾಪಾರ ಬಂದ್ ಆದರೂ ಸಮಸ್ಯೆ ಆಗಲಿದೆ ಎಂದು ದುಬಾರಿ ಹಣ ನೀಡಿ ವಾಣಿಜ್ಯ ಸಿಲಿಂಡರ್ ಖರೀದಿಸಿ ವ್ಯಾಪಾರ ಮುಂದುವರಿಸಿದ್ದಾರೆ.

ಬೇಲೂರಿನ ಚನ್ನಕೇಶವಸ್ವಾಮಿ ದೇವಾಲಯದ ದಾಸೋಹಕ್ಕೂ ಸಿಲಿಂಡರ್ ಕೊರತೆ ಬಿಸಿ ತಟ್ಟಿದೆ.

ಶುಕ್ರವಾರ ದಾಸೋಹ ವ್ಯವಸ್ಥೆ ಇಲ್ಲದ್ದರಿಂದ ಭಕ್ತರು ಪ್ರಸಾದ ಸೇವಿಸದೆ ವಾಪಾಸ್ಸಾದರು.

ದೇವಾಲಯ ಆಡಳಿತಾಧಿಕಾರಿ ಯೋಗೇಶ್ ಮಾತನಾಡಿ, ನಮಗೆ ಪ್ರತಿನಿತ್ಯ ವಾಣಿಜ್ಯ ಸಿಲಿಂಡರ್ ಅವಶ್ಯಕತೆ ಇದೆ. ಎರಡು ದಿನಗಳಿಂದ ಸಿಲಿಂಡರ್ ಅಭಾವದಿಂದ ಭಕ್ತರಿಗೆ ದಾಸೋಹ ವ್ಯವಸ್ಥೆ ನಿಲ್ಲಿಸಲಾಗಿದೆ. ಇದರ ಜೊತೆ ಬಾಯ್ಲರ್ ಸಹ ಕೆಟ್ಟಿದೆ. ಅದರಿಂದ ದಾಸೋಹಕ್ಕೆಂದು ಬಂದಂತಹ ಪ್ರವಾಸಿಗರಿಗೆ ತೊಂದರೆಯಾಗಿದೆ.

ಸದ್ಯಕ್ಕೆ ಸೌದೆ ಒಲೆ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಮಾಡಲಾಗಿದೆ. ಶನಿವಾರದಿಂದ ಸೌದೆ ಒಲೆಯಲ್ಲಿ ಅಡುಗೆ ಮಾಡಲು ನಿರ್ಧರಿಸಲಾಗಿದೆ. ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ ಸಮಸ್ಯೆ ಇತ್ಯರ್ಥಪಡಿಸಲಾಗುವುದು ಎಂದರು.

### ಹಾಸ್ಟೆಲ್‌ಗೆ ಸೌದೆ ಒಲೆ ಆಧಾರ

ಸಿಲಿಂಡರ್ ಸಮಸ್ಯೆಯಿಂದಾಗಿ ಹಾಸನದ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಅಡುಗೆಗಾಗಿ ಸೌದೆ ಒಲೆ ಮೊರೆ ಹೋಗಲಾಗಿದೆ. ಬೆಳಿಗ್ಗೆ ಉಪಾಹಾರ ಮಾಡುತ್ತಿದ್ದಾಗಲೇ ಸಿಲಿಂಡರ್ ಖಾಲಿಯಾದವು. ಮಕ್ಕಳಿಗೆ ತೊಂದರೆಯಾಗಬಾರದೆಂದು ಸೌದೆ ಖರೀದಿಸಿ ಅಡುಗೆ ಮಾಡಿದ್ದೇವೆಂದು ಸಿಬ್ಬಂದಿ ಹೇಳಿದರು. ಎರಡು ದಿನಗಳ ಮೊದಲೇ ಬುಕ್ ಮಾಡಿದ್ದರೂ ಇನ್ನೂ ತಲುಪಿಲ್ಲ. ಮೇಲಾಧಿಕಾರಿಗಳು ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕೆಂದು ಅವರು ಒತ್ತಾಯಿಸಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248